ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH
ಪತ್ರಿಕಾ ತುಣುಕುಗಳು
PAPER CLIPPINGS
ಶಾಖೆ / ವಿಷಯ : DEPARTMENT / SUBJECT: ಆರ್ಥಿಕ
ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ
ದಿನಾಂಕ : DATE 31/5/2020

## 10 ಕೋಟಿಗೂ ಮೀರಿದ ಅನುದಾನಕ್ಕೆ ಹಣಕಾಸು ಇಲಾಖೆ ಒಪ್ಪಿಗೆ ಕಡ್ಡಾಯ

# ಇಲಾಖೆ ಖರ್ಚುಗಳಿಗೆ ಮೂಗುದಾರ

■ **ವಿಕ ಸುದ್ದಿಲೋಕ** ಬೆಂಗಳೂರು

ಕೊರೊನಾ ಲಾಕ್‌ಡೌನ್ ಹೊಡೆತಕ್ಕೆ ತತ್ತರಿಸಿರುವ ರಾಜ್ಯ ಸರಕಾರಕ್ಕೆ ಆರ್ಥಿಕ ಮಿತವ್ಯಯ ಸಾಧಿಸುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಎಲ್ಲ ಇಲಾಖೆಗಳಲ್ಲಿ ಖರ್ಚು ಮಾಡಬಹುದಾದ ಬಾಬ್ತುಗಳಿಗೆ ಮಿತಿ ಹೇರಿ ಹಣಕಾಸು ಇಲಾಖೆ ಆದೇಶ ಹೊರಡಿಸಿದೆ.

ರಾಜಸ್ವ ಸಂಗ್ರಹಣೆ ಗುರಿ ತಲುಪುವುದಕ್ಕೆ ಇನ್ನಷ್ಟು ಕಾಲ ಬೇಕಾಗುವ ಹಿನ್ನೆಲೆಯಲ್ಲಿ ಪ್ರಸಕ್ತ ಹಣಕಾಸು ವರ್ಷದ ಹೊಸ ಯೋಜನೆಗಳಿಗೆ ಹಣಕಾಸು ಇಲಾಖೆಯ ಒಪ್ಪಿಗೆ ಪಡೆಯುವುದು ಕಡ್ಡಾಯಗೊಳಿಸಲಾಗಿದೆ. ಇಲಾಖೆಗಳಿಗೆ ಹಂಚಿಕೆಯಾದ ಬಜೆಟ್ ಮೊತ್ತದ ಅರ್ಧದಷ್ಟನ್ನು ಮಾತ್ರ ಜೂನ್‌ನಿಂದ ನವೆಂಬರ್ ವರೆಗೆ ಮಾತ್ರ ಬಿಡುಗಡೆಗೊಳಿಸಿ ಹಣಕಾಸು ಇಲಾಖೆ ಆದೇಶ ಹೊರಡಿಸಿದೆ.

ವೇತನ, ಪಿಂಚಣಿ, ಸಾಮಾಜಿಕ ಭದ್ರತಾ ಪಿಂಚಣಿ, ಆಹಾರ ಭದ್ರತೆ ಮತ್ತು ಮೂಲ ಆಡಳಿತಕ್ಕೆ ಸಂಬಂಧಪಟ್ಟಂತೆ ಪೂರ್ಣ ವೆಚ್ಚ ಭರಿಸಬಹುದಾಗಿದೆ



ಎಂದು ಹಣಕಾಸು ಇಲಾಖೆ ಕಾರ್ಯದರ್ಶಿ(ವೆಚ್ಚ) ಏಕ್‌ರೂಪ್ ಕೌರ್ ಸುತ್ತೋಲೆ ಕಳುಹಿಸಿದ್ದಾರೆ.

ಇಲಾಖೆಗೆ ಪ್ರತ್ಯಾಯೋಜಿಸಿದ ಯೋಜನೆಗಳು ಹಾಗೂ ಪ್ರತ್ಯಾಯೋಜನೆ ಮಾಡದ ಯೋಜನೆಗಳು ಎಂದು ಎರಡು ರೀತಿಯಲ್ಲಿ ವರ್ಗೀಕರಿಸಿ ವೆಚ್ಚಕ್ಕೆ ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಗಳು ನಿಗಮ-ಮಂಡಳಿ ಮೂಲಕ ಅನುಷ್ಠಾನವಾಗುತ್ತಿದ್ದರೆ ಅವುಗಳ ಬ್ಯಾಂಕ್ ಖಾತೆಯಲ್ಲಿ ಹಣ ಇದೆಯೋ, ಇಲ್ಲವೋ? ಎಂಬ ವಿವರ ನೀಡುವುದು ಕಡ್ಡಾಯವಾಗಲಿದೆ.

### ಹಣಕಾಸು ಇಲಾಖೆ ಹೊರಡಿಸಿರುವ ಮಾರ್ಗಸೂಚಿ ಹೀಗಿದೆ...

- ಆಡಳಿತಾತ್ಮಕ ಅನುಮೋದನೆ ಆದೇಶವನ್ನು ಹಣ ಬಿಡುಗಡೆ ಆದೇಶ ಎಂದು ಭಾವಿಸಿ ಕಾಮಗಾರಿ ಆರಂಭಿಸುವಂತಿಲ್ಲ, ಪ್ರತ್ಯೇಕ ಆದೇಶ ಅಗತ್ಯ.
- 10 ಕೋಟಿ ರೂ.ವರೆಗಿನ ಕಾಮಗಾರಿ ಹಾಗೂ ಸರಕು, ಸೇವೆ ಸಂಗ್ರಹಣೆ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ಇದೆ ಎಂದು ಭಾವಿಸಬಹುದಾಗಿದೆ.
- ಪೂರಕ ಅಂದಾಜಿನಲ್ಲಿ 10 ಕೋಟಿಗೂ ಮೇಲ್ಪಟ್ಟು ಅನುದಾನ ಒದಗಿಸಿದ್ದಲ್ಲಿ ಒಪ್ಪಿಗೆ ಕಡ್ಡಾಯ.
- ಷೇರು ಬಂಡವಾಳ ಹಾಗೂ ಸಾಲ ಬಿಡುಗಡೆಗೆ ಹಣಕಾಸು ಇಲಾಖೆ ಪೂರ್ವಾನ್ವಯ ಅಗತ್ಯ.
- ಲೋಕೋಪಯೋಗಿ, ಜಲಸಂಪನ್ಮೂಲ, ಪರಿಶಿಷ್ಟರ ವಿಶೇಷ ಉಪಯೋಜನೆಗಳಿಗೆ ಮಾತ್ರ 10 ಕೋಟಿ ರೂ. ಮೇಲ್ಪಟ್ಟು ಅನುಮೋದನೆ ಬೇಕಿಲ್ಲ.
- ಯಾವುದೇ ಇಲಾಖೆಯ ಆಯವ್ಯಯ ಮೊತ್ತಕ್ಕಿಂತ ಶೇ.50ಕ್ಕಿಂತ ಮೇಲ್ಪಟ್ಟ ಮೊತ್ತ ಬಿಡುಗಡೆಗೂ ಅನುಮತಿ ಅನಿವಾರ್ಯ.
- ಅನುಮೋದನೆ ಇಲ್ಲದೇ ಯಾವುದೇ ಮೊತ್ತವನ್ನು ವೈಯಕ್ತಿಕ ಠೇವಣಿ ಅಥವಾ ಬ್ಯಾಂಕ್ ಖಾತೆಗೆ ಜಮಾ ಮಾಡುವಂತಿಲ್ಲ.
- ಯೋಜನೆಗೆ ಹಣ ಬಿಡುಗಡೆ ವೇಳೆ ಆರಂಭಿಕ ಶಿಲ್ಕು, ಲಭ್ಯವಿರುವ ಮೊತ್ತ, ವೆಚ್ಚ ಶೇಕಡವಾರು ಲಭ್ಯತೆ ಆಧರಿಸಿಯೇ ಬಿಡುಗಡೆ ಮಾಡಬೇಕು.
- ಜೂನ್ 30ರೊಳಗಾಗಿ ಎಲ್ಲ ಇಲಾಖೆಗಳ ಎಚ್‌ಆರ್‌ಎಂಎಸ್ ಮೂಲಕವೇ ವೇತನ ಬಿಡುಗಡೆ.
- 15 ಹಾಗೂ 14ನೇ ಹಣಕಾಸು ಆಯೋಗದ ಮೂಲ ಅನುದಾನಕ್ಕೆ ಕ್ರಿಯಾ ಯೋಜನೆ ಅಗತ್ಯವಿಲ್ಲ, 15 ದಿನದೊಳಗೆ ಇಂಥ ಮೊತ್ತ ಬಿಡುಗಡೆ.
- ಆಡಳಿತಾತ್ಮಕ ವೆಚ್ಚಕ್ಕೆ ನಿಗದಿಯಾದ ಹಣದಲ್ಲಿ ವಾಹನ, ಪೀಠೋಪಕರಣ ಖರೀದಿಸುವಂತಿಲ್ಲ.
- ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನ ಕಡಿತವಾಗುವುದರಿಂದ ಬಿಡುಗಡೆಯಾಗುವ ಹಣದ ಪೂರ್ವ ಮಾಹಿತಿ ಪಡೆದು ಕ್ರಿಯಾ ಯೋಜನೆ ರೂಪಿಸಬೇಕು.
- ಆರ್ಥಿಕ ಇಲಾಖೆಯ ಸಹಮತಿ ಇದೆ ಎಂದು ಭಾವಿಸಿ ಆಯವ್ಯಯದ ಶೇ.25ರಷ್ಟನ್ನು ಮಾತ್ರ 2 ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡುವುದು.